ಒಎಸ್–260/2002
ಪಿ.ಡಬ್ಲ್ಯೂ -1

ದಿಃ 23-02-2015 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ವಕೀಲ ರವರಿಂದಃ

ನನ್ನ ಮದುವೆ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಚಿಕ್ಕವಳಿದ್ದಾಗ ನನ್ನ ಮದುವೆ ಮಾಡಿದ್ದಾರೆ. ನಾನು ಯಾವಾಗ ಬಾಳ್ವೆ ಮಾಡಲು ಹೋದೆನು ಎಂದು ನನಗೆ ಗೊತ್ತಿಲ್ಲ. ನಾನು ಚಿಕ್ಕಂದಿನಿಂದಲೂ ನನ್ನ ಗಂಡನ ಮನೆಯಲ್ಲಿಯೇ ಇದ್ದೇನೆ. ಮೆಳವಂಕಿಯ ಮಾಳಪ್ಪನ ಗುಡಿಯ ಹತ್ತಿರ ನನ್ನ ಗಂಡನ ಮನೆ ಇದೆ. ಒಂದನೇ ಪ್ರತಿವಾದಿಯ ಮನೆ ನನ್ನ ಗಂಡನ ಮನೆಯ ಒಂದು ಮನೆ ಬಿಟ್ಟು ಅಂತರದಲ್ಲಿ ಇದೆ. ಒಂದನೇ ಪ್ರತಿವಾದಿ ಮತ್ತು ಅವರ ಹೆಂಡತಿ, ಮಕ್ಕಳು ಎಲ್ಲರೂ ಮತದಾರರ ಪತ್ರ, ರೇಶನ್ ಕಾರ್ಡ್ ಮಾಡಿಸಿಕೊಂಡು ಕೂಡಿಯೇ ಇದ್ದರು. ಮನೆಯ ವ್ಯವಹಾರವನ್ನು ಒಂದನೇ ಪ್ರತಿವಾದಿ ಮಾಡುತ್ತಿದ್ದ ಎಂದರೇ ಸುಳ್ಳು. ಒಂದನೇ ಪ್ರತಿವಾದಿಯ ಹೆಂಡತಿ ಮರಣ ಹೊಂದಿದ ನಂತರ ನಾನು ಅವರ ಮಕ್ಕಳನ್ನು 7 ವರ್ಷ ಜೋಪಾನ ಮಾಡಿದ್ದೇನೆ. ನಾನು ಜೋಪಾನ ಮಾಡಿದರ ಬಗ್ಗೆ ಯಾವುದೇ ಕಾಗದ ಪತ್ರಗಳು ಇಲ್ಲ. ನಾನು ದಾವೆ ಹಾಕುವ ಸಮಯದಲ್ಲಿ ಯಾವುದೇ ಕಾಗದ ಪತ್ರಗಳನ್ನು ನೋಡಿಲ್ಲ. ದಾವೆ ಹಾಕುವ ಸಮಯದಲ್ಲಿ ಒಂದನೇ ಪ್ರತಿವಾದಿ ನನ್ನ ಜೊತೆ ಮಾತನಾಡುತ್ತಿದ್ದ. ದಾವೆ ಹಾಕುವ ವಿಷಯವನ್ನು ನಾನು ಒಂದನೇ ಪ್ರತಿವಾದಿಗೆ ಹೇಳಿಲ್ಲ. ಒಂದನೇ ಪ್ರತಿವಾದಿಯ ಹೆಂಡತಿ ಯಾವಾಗ ಮರಣ ಹೊಂದಿದಳು ಎಂದು ನನಗೆ ಗೊತ್ತಿಲ್ಲ.

ಒಂದನೇ ಪ್ರತಿವಾದಿಯು ಕುಡಿದು ಬರುತ್ತಿದ್ದ ಬಗ್ಗೆ ನನಗೆ ಗೊತ್ತು. ಒಂದನೇ ಪ್ರತಿವಾದಿಯ ಆಗುಹೋಗುಗಳ ಬಗ್ಗೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿ 6 ವರ್ಷಗಳ ಹಿಂದೆ ಮರಣ ಹೊಂದಿದ್ದಾನೆ. ನಾನು ಈ ದಾವೆಯ ಬಗ್ಗೆ ಓದಿಸಿ ತಿಳಿದುಕೊಂಡಿಲ್ಲ. ಮೊದಲು ನಾವು ಎರಡನೇ ಪ್ರತಿವಾದಿಯ ವಿರುದ್ಧ ದಾವೆ ಹೂಡಿರಲಿಲ್ಲ. ಒಂದನೇ ಪ್ರತಿವಾದಿಯ ಒಕ್ಕಲುತನ ಮಾಡುತ್ತಿದನು ಎಂದರೇ ಸರಿಯಲ್ಲ. ಒಂದನೇ ಪ್ರತಿವಾದಿಯು ಸರಾಯಿ ಕುಡಿಯುತ್ತಿದ್ದ ಎಂದು ಸುಳ್ಳು ಹೇಳುತ್ತೇನೆ ಎಂದರೇ ಸರಿಯಲ್ಲ. ದಾವಾ ಆಸ್ತಿಯ ವಿವರ ನನಗೆ ಗೊತ್ತಿಲ್ಲ. ಉತಾರದಲ್ಲಿ ನಿಂಗಪ್ಪನ ಹೆಸರು ಇದೆ ಎಂದರೇ ಸರಿ. ಇದಕ್ಕೆ ಮೊದಲು ಒಂದನೇ ಪ್ರತಿವಾದಿಯ ಹೆಸರು ಇತ್ತು. ದಾವಾ ಸ್ವತ್ತಿನಲ್ಲಿ ಕಬ್ಬು ಬೆಳೆಯುತ್ತದೆ ಎಂದರೇ ಸರಿ. ಬೆಳೆ ಬೆಳೆದು ಕಟಾವು ಮಾಡಿ ಎರಡನೇ ಪ್ರತಿವಾದಿಗೆ ಮಾರಾಟ ಮಾಡಿ ಆದಾಯ ಪಡೆಯುತ್ತಿದ್ದಾನೆ ಎಂದರೇ ಸುಳ್ಳು. ನ್ಯಾಯಾಲಯದಲ್ಲಿ ಇದೇ ಪ್ರಕರಣದಲ್ಲಿ ರಾಯಪ್ಪನ ವಿರುದ್ಧ ದಾವಾ ಸ್ವತ್ತಿನಲ್ಲಿ ಬೆಳೆದ ಕಬ್ಬಿನಿಂದ ಆದಾಯದ ಬಗ್ಗೆ ಆದ ಮಧ್ಯಂತರ ಆದೇಶದ ಬಗ್ಗೆ ನಾನು ತಿಳಿದುಕೊಂಡಿಲ್ಲ.

ದಾವಾ ಜಮೀನಿನಲ್ಲಿ ನಾನೇ ಕಬ್ಬು ಬೆಳೆದು ಮಾರಾಟ ಮಾಡಿ ಆದಾಯ ಪಡೆದ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ. ಸಿದ್ಧಪ್ಪಾ ರಾವನ್ನವರ ಅವರ ಕಡೆಯಿಂದ ನಾವು ಬೆಲ್ಲ ತೆಗೆಯುವ ಕೆಲಸ ಮಾಡಿಸುತ್ತಿದ್ದೆವು. ಸಿದ್ಧಪ್ಪನು ಕಲಾರಕೊಪ್ಪದಲ್ಲಿರುವುದರಿಂದ ಸಾಕ್ಷಿ ಮಾಡಿಸಲು ಆಗುವುದಿಲ್ಲ. ಒಂದನೇ ಪ್ರತಿವಾದಿಯದು ಖರೀದಿಗೆ ತೆಗೆದುಕೊಂಡ ಆಸ್ತಿ ಎಂದರೇ ಸುಳ್ಳು. ನಾವು ನಮ್ಮ ಮೊದಲ ಆಸ್ತಿಯನ್ನು ಭೀಮಪ್ಪನಿಗೆ ಕೊಟ್ಟಿದ್ದೇವೆ. ಅವನ ತಂದೆಯ ಹೆಸರು ಮತ್ತು ಅಡ್ಡಹೆಸರು ನನಗೆ ಗೊತ್ತಿಲ್ಲ. ನಾವು ಎಷ್ಟು ವರ್ಷಗಳ ಹಿಂದೆ ಆಸ್ತಿಯನ್ನು ಭೀಮಪ್ಪನಿಗೆ ಕೊಟ್ಟಿದ್ದೇವೆ ಎಂದರೇ ಗೊತ್ತಿಲ್ಲ. ದಾವಾ

ಆಸ್ತಿಯನ್ನು ಖರೀದಿಗೆ ತೆಗೆದುಕೊಳ್ಳುವ ಎಷ್ಟು ವರ್ಷ ಮುನ್ನ ರಾಯಪ್ಪನ ಆಸ್ತಿಯನ್ನು ಭೀಮಪ್ಪನಿಗೆ ಕೊಟ್ಟಿದ್ದೇವೆ ಎಂದರೇ ಗೊತ್ತಿಲ್ಲ. ಆ ಕಾಲಕ್ಕೆ ನಾನು ಮತ್ತು ರಾಯಪ್ಪನ ಹೆಂಡತಿ, ಮಕ್ಕಳು ಹಾಜರಿರಲಿಲ್ಲ. ನಿಂಗಪ್ಪನ ಹೆಸರು ಉತಾರದಲ್ಲಿ ನಮೂದಾದ ನಂತರ ನಾವು ಯಾವುದೇ ಅಫೀಲು ಮಾಡಿಲ್ಲ. ದಾವಾ ಜಮೀನಿನ ಮೇಲೆ ಎರಡನೇ ಪ್ರತಿವಾದಿಯು ಸಾಲ ತೆಗೆದಿದ್ದಾನೆ ಎಂದರೇ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಮೇಲೆ ನೀರಿನ ಕರ ಮತ್ತು ಭೂಮಿ ಕರ ಕಟ್ಟಿದ ಬಗ್ಗೆ ನಮ್ಮ ಹತ್ತಿರ ಯಾವುದೇ ರಶೀದಿಗಳು ಇಲ್ಲ. ದಾವಾ ಆಸ್ತಿಯನ್ನು ಮಾರುವ ಮುನ್ನ ಒಂದನೇ ಪ್ರತಿವಾದಿ ಎರಡನೇ ಪ್ರತಿವಾದಿಗೆ ಕರಾರು ಪತ್ರ ಮಾಡಿಕೊಟ್ಟಿದ್ದನು ಎಂಬುವ ಬಗ್ಗೆ ಗೊತ್ತಿಲ್ಲ.

ದಾವಾ ಜಮೀನನ್ನು ಖರೀದಿಗೆ ಕೊಟ್ಟ ನಂತರ ವಾದಿ 1, 2, 4 ಮತ್ತು 5 ಹುಟ್ಟಿದ್ದಾರೆ ಎಂದರೇ ಸುಳ್ಳು. ವಾದಿ 1, 2, 4 ಮತ್ತು 5 ಇವರ ಹೆಸರನ್ನು ಶಾಲೆಯಲ್ಲಿ ದಾಖಲು ಮಾಡಿಸಿದ್ದೇನೆ ಎಂದರೇ ಸರಿ. ಅವರು ಹುಟ್ಟಿದ ದಿನಾಂಕ ನನಗೆ ಗೊತ್ತಿಲ್ಲ. ದಾವಾ ಜಮೀನನ್ನು ಖರೀದಿಗೆ ಕೊಡುವ ಮುನ್ನ ವಾದಿ 1, 2, 4 ಮತ್ತು 5 ಹುಟ್ಟಿಲ್ಲ ಎಂದರೇ ಸುಳ್ಳು. ಪಿ.ಡಬ್ಲ್ಯೂ 3 ನನ್ನ ಮಗ. ಒಂದನೇ ಪ್ರತಿವಾದಿಗೆ ಆದಾಯ ಕಡಿಮೆ ಇದ್ದು ಖರ್ಚು ಹೆಚ್ಚು ಇತ್ತು ಎಂದರೇ ಸಾಕ್ಷಿಯು ನಾನೇ ಖರ್ಚನ್ನು ನೋಡಿಕೊಳ್ಳುತ್ತಿದ್ದೆ ಎಂದು ಹೇಳುತ್ತಾರೆ, ನಾನು ಖರ್ಚು ಮಾಡಿದ ಬಗ್ಗೆ ಕಾಗದ ಪತ್ರಗಳು ಇಲ್ಲ. ನಾನೇ ಖರ್ಚನ್ನು ನೋಡಿಕೊಳ್ಳುತ್ತಿರಲಿಲ್ಲ ಎಂದರೇ ಸುಳ್ಳು. ಎರಡನೇ ಪ್ರತಿವಾದಿಯೇ ದಾವಾ ಜಮೀನನ್ನು ಸುಧಾರಣೆ ಮಾಡಿದ್ದಾರೆ ಎಂದರೇ ಸುಳ್ಳು. ದಾವಾ ಜಮೀನು ನಿಂಗಪ್ಪ ಖರೀದಿ ತೆಗೆದುಕೊಂಡ ದಿನ ದಿಂದ ಅವನೇ ಕಬ್ಜಾದಲ್ಲಿದ್ದಾನೆ ಬೇರೆ ಯಾರು ಕಬ್ಜಾದಲ್ಲಿ ಇಲ್ಲ ಎಂದರೇ ಸುಳ್ಳು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ